# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ:08192-208029, ಫ್ಯಾಕ್ಸ್:08192-208008


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮೃತಂ :

**ಸಂಖ್ಯೆ:ದಾವಿವಿ/ಅಭಿ/203/2019-20** /100/41 **ದಿನಾಂಕ:24.02.2020**

## :ಸುತ್ತೋಲೆ:

**ವಿಷಯ:** **ಸೇವಾ ಸಿಂಧು ಯೋಜನೆಯ** ಅನುಷ್ಠಾನ ಕುರಿತು ಆಯೋಜಿಸಿರುವ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗುವ ಬಗ್ಗೆ

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:24.02.2020

******

ವಿಶ್ವವಿದ್ಯಾನಿಲಯದ ಅಧೀನದಲ್ಲಿ ಸಂಲಗ್ನಗೊಂಡ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಹಾಗೂ ಎಲ್ಲಾ ಸಂಲಗ್ನಗೊಂಡ ಕಾಲೇಜುಗಳಲ್ಲಿ ಸೇವಾ ಸಿಂಧು ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಈ ಕುರಿತು ಸೂಕ್ತ ತಯಾರಿ ಮಾಡಿಕೊಳ್ಳಲು, ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನಿಂದ ಸೇವಾ ಸಿಂಧು ಯೋಜನೆಯ ಅನುಷ್ಠಾನಕ್ಕೆ ಒಬ್ಬ **ನೋಡೆಲ್ ಅಧಿಕಾರಿ** (ಕಂಪ್ಯೂಟರ್ ಪರಿಣಿತಯುಳ್ಳವರು)ಯನ್ನು ನಿಯುಕ್ತಿಗೊಳಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಈ ರೀತಿ ನಿಯುಕ್ತಗೊಂಡ ನೊಡೆಲ್ ಅಧಿಕಾರಿಗಳಿಗೆ ಸರ್ಕಾರದ ನಿರ್ದೇಶಾನುಸಾರ ವಿಶ್ವವಿದ್ಯಾನಿಲಯದ ವತಿಯಿಂದ **ದಿನಾಂಕ:28.02.2020ರಂದು ಪೂರ್ವಾಹ್ನ 11:00 ಗಂಟೆಗೆ ಎಂ.ಬಿ.ಎ. ಸಭಾಂಗಣದಲ್ಲಿ** ಒಂದು ದಿನದ ತರಬೇತಿಯನ್ನು ಸೇವಾ ಸಿಂಧು ವಿಭಾಗದ ಮುಖ್ಯಸ್ಥರು ನೀಡಲಿರುವರು.

ಎಲ್ಲಾ ಪ್ರಾಂಶುಪಾಲರು ಹಾಗೂ ನೊಡೆಲ್ ಅಧಿಕಾರಿಗಳು ಸೇವಾ ಸಿಂಧು ತರಬೇತಿಗೆ ತಪ್ಪದೇ ಹಾಜರಾಗುವಂತೆ ತಿಳಿಸಲಾಗಿದೆ. ಈ ವಿಷಯವನ್ನು **'ಆದ್ಯತೆ ಮೇರೆಗೆ'** ಪರಿಗಣಿಸಲು ತಿಳಿಸಲಾಗಿದೆ.

ಈ ಸಂಬಂಧ ತರಬೇತಿಗೆ ಹಾಜರಾಗುವವರಿಗೆ ವಿಶ್ವವಿದ್ಯಾನಿಲಯದಿಂದ ಯಾವುದೇ ಪ್ರಯಾಣ ಭತ್ಯೆ/ದಿನ ಭತ್ಯೆ ನೀಡಲಾಗುವುದಿಲ್ಲ.

ಆದೇಶಾನುಸಾರ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಗೆ,
ವಿಶ್ವವಿದ್ಯಾನಿಲಯಕ್ಕೆ ಸಂಲಗ್ನಗೊಂಡ ಎಲ್ಲಾ ಸ್ನಾತಕ/ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

**ಪ್ರತಿಗಳು:**

1. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತ ಕಾರ್ಯಾಲಯ ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
4. ಕಛೇರಿ ಪ್ರತಿ.